THE HINDU MANGALURU
FRIDAY, MARCH 12, 2021

# Paediatric nephrology unit opened

SPECIAL CORRESPONDENT
MANGALURU

A paediatric nephrology division was inaugurated at Kasturba Medical College Hospital in Manipal on Thursday.

It will provide diagnostic evaluations, medical treatments, and follow-up monitoring for children who suffer from the entire spectrum of kidney and urinary diseases.

The new division will be overseen by Dharshan Rangaswamy who has obtained the Clinical Fellowship in Paediatric Nephrology, approved from Royal Australasian College of Physicians, Sydney, Australia, a hospital release said.

Speaking after inaugurating the new division, Pushpa G. Kini, professor and unit head, Department of Paediatrics of the hospital, said that kidney disease patients should not take any medicines without consulting doctors.

They should follow a healthy diet and should consume adequate water. The hospital also organised an educative session on kidney disease on the occasion of World Kidney Day. This year's theme was 'living well with kidney disease.'

Speaking on the occasion, Sharath K. Rao, Dean, KMC, Manipal, said that chronic diabetes and hypertension affect the kidneys.

According to recent research, food grown from industrial waste can also cause kidney disease, the dean added.

THE NEW INDIAN EXPRESS

FRIDAY 12.03.2021

## Paediatric Nephrology division starts at Kasturba

Udupi: Division of Paediatric Nephrology was inaugurated and education session on Kidney Disease was organised at Kasturba Medical College and Hospital, Manipal on eve of World Kidney day 2021 on Thursday. This year, the theme is 'Living well with Kidney Disease". Dr Pushpa G Kini, Professor and Unit Head Department of Pediatrics, Kasturba Hospital, Manipal inaugurated the new division. ENS

TIMES CITY

THE TIMES OF INDIA, MANGALURU
SATURDAY, MARCH 13, 2021

# Division of paediatric nephrology inaugurated

TIMES NEWS NETWORK

**Manipal:** The division of paediatric nephrology was inaugurated, and an education session on kidney disease was organised at Kasturba Medical College and Hospital, Manipal, on Thursday.

The theme for World Kidney Day is living well with kidney disease. Dr Pushpa G Kini, professor and unit head, department of paediatrics, Kasturba Hospital, Manipal, inaugurated the new division and said, "Kidney disease patients should adopt eight formulas in life, including positive thinking, regular visits to the doctor and kidney function test, stop smoking, have a healthy diet, controlled blood pressure, normal blood sugar level, should take adequate water and should not take any medicines without consulting a doctor for good living."

Dr Sharath K Rao, dean KMC Manipal, inaugurated the education session on kidney disease.

ಉದಯವಾಣಿ

ಮಣಿಪಾಲ 2021

ಮಾರ್ಚ್ 13 | ಶನಿವಾರ

# ಮಣಿಪಾಲ ಕೆಎಂಸಿ ಆಸ್ಪತ್ರೆ ಮಕ್ಕಳ ಮೂತ್ರಪಿಂಡ ವಿಭಾಗ ಉದ್ಘಾಟನೆ



**ಉಡುಪಿ, ಮಾ. 12:** ವಿಶ್ವ ಮೂತ್ರಪಿಂಡ ದಿನದಂದು ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಮೂತ್ರಪಿಂಡ ವಿಭಾಗದ ಉದ್ಘಾಟನೆ ಮತ್ತು ಮೂತ್ರಪಿಂಡ ರೋಗಿಗಳಿಗೆ ಮೂತ್ರಪಿಂಡ ಕಾಯಿಲೆ ಬಗ್ಗೆ ಜಾಗೃತಿ ಶಿಕ್ಷಣ ಆಯೋಜಿಸಲಾಯಿತು.

ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ವಿಭಾಗದ ಪ್ರಾಧ್ಯಾಪಕಿ ಮತ್ತು ಘಟಕ ಮುಖ್ಯಸ್ಥೆ ಡಾ। ಪುಷ್ಪಾ ಜಿ. ವಿಭಾಗ ಉದ್ಘಾಟಿಸಿದರು. ಮೂತ್ರಪಿಂಡ ಕಾಯಿಲೆ ಬಗ್ಗೆ ಅರಿವು ಮತ್ತು ಜಾಗೃತಿ ಕಾರ್ಯಕ್ರಮವನ್ನು ಕೆಎಂಸಿ ಡೀನ್ ಡಾ। ಶರತ್ ಕೆ. ರಾವ್ ಉದ್ಘಾಟಿಸಿದರು .

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ್ಣ ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ ಮೂತ್ರಪಿಂಡ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ। ಶಂಕರ್ ಪ್ರಸಾದ್ ಎನ್., ಮಕ್ಕಳ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ। ಲೆಸ್ಲಿ ಲೀವಿಸ್ ಉಪಸ್ಥಿತರಿದ್ದರು.

ಮಂಗಳೂರಿನ ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ। ಮಂಜುನಾಥ್, ಮಣಿಪಾಲದ ಮೂತ್ರಪಿಂಡ ವಿಭಾಗದ ಡಾ। ಶಂಕರ್ ಪ್ರಸಾದ್, ಡಾ। ರವೀಂದ್ರ ಪ್ರಭು ಎ., ಡಾ। ದರ್ಶನ್ ರಂಗಸ್ವಾಮಿ, ಪ್ರಶಾಮಕ ಮತ್ತು ಸಹಾಯಕ ಆರೈಕೆ ವಿಭಾಗದ ಮುಖ್ಯಸ್ಥ ಡಾ। ನವೀನ್ ಎಸ್. ಸಲೀನ್ಸ್ ಅವರು ಜಾಗೃತಿ ಭಾಷಣ ನೀಡಿದರು.

ವಿಜಯವಾಣಿ
ಶನಿವಾರ | 13 ಮಾರ್ಚ್ | 2021
VIJAYAVANI ■ 13 MARCH 2021

# ಬದಲಾದ ಜೀವನ ಶೈಲಿ ಕಿಡ್ನಿ ಕಾಯಿಲೆಗೆ ಮೂಲ

■ ವಿಜಯವಾಣಿ ಸುದ್ದಿಜಾಲ ಉಡುಪಿ

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವಿಶ್ವ ಮೂತ್ರಪಿಂಡ ದಿನ ಅಂಗವಾಗಿ ಗುರುವಾರ ಮಕ್ಕಳ ಮೂತ್ರಪಿಂಡ ವಿಭಾಗ ಉದ್ಘಾಟನೆ ಮತ್ತು ಮೂತ್ರಪಿಂಡ ರೋಗಿಗಳಿಗೆ ಕಾಯಿಲೆ ಬಗ್ಗೆ ಜಾಗೃತಿ ಶಿಬಿರ ನಡೆಯಿತು.

ಕೆಎಂಸಿ ಡೀನ್ ಡಾ.ಶರತ್ ಕೆ. ರಾವ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸದ್ಯದ ಜೀವನ ಶೈಲಿಯನ್ನು ನೋಡಿದರೆ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಕಾಯಿಲೆಗಳು ಹೆಚ್ಚಾಗಿ ಕಂಡು ಬರುತ್ತಿವೆ. ಈ ಕಾಯಿಲೆಗಳು ಕಿಡ್ನಿ ಮೇಲೆ ಪರಿಣಾಮ ಬೀರುತ್ತಿವೆ. ಆದರೆ ಇದರ ಬಗ್ಗೆ ಜಾಗೃತಿ ವಹಿಸಿದರೆ ಶೇ.50 ರಷ್ಟು ಕಿಡ್ನಿ ಕಾಯಿಲೆ ಕಡಿಮೆ ಮಾಡಬಹುದು. ಇತ್ತೀಚಿನ ಸಂಶೋಧನೆ ಪ್ರಕಾರ ಕೈಗಾರಿಕಾ ತ್ಯಾಜ್ಯದಿಂದ ಬೆಳೆದ ಆಹಾರ ಪದಾರ್ಥ ಕೂಡ ಮೂತ್ರಪಿಂಡ ಕಾಯಿಲೆಗೆ ಕಾರಣವಾಗುತ್ತಿದೆ. ಇದರ ಬಗ್ಗೆ ಜಾಗೃತಿ ಬೇಕಾಗಿದೆ ಎಂದರು.

ಮಕ್ಕಳ ವಿಭಾಗದ ಮುಖ್ಯಸ್ಥೆ ಡಾ.ಪುಷ್ಪಾ ಜಿ. ಕಿಣಿ ಮಾತನಾಡಿ, ಮೂತ್ರಪಿಂಡ ಕಾಯಿಲೆ ಇರುವವರು ಉತ್ತಮ ಜೀವನ ನಡೆಸಲು ಈ ಎಂಟು ಸೂತ್ರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಧನಾತ್ಮಕ ಚಿಂತನೆ, ನಿಯಮಿತವಾಗಿ ವೈದ್ಯರನ್ನು ಭೇಟಿ ಮತ್ತು ಕಿಡ್ನಿ ಕಾರ್ಯ ಪರೀಕ್ಷಿಸುವುದು, ಧೂಮಪಾನದಿಂದ ದೂರ ಇರುವುದು, ಪೌಷ್ಟಿಕಾಂಶವುಳ್ಳ ಪಥ್ಯಾಹಾರ, ರಕ್ತದೊತ್ತಡ ನಿಯಂತ್ರಣ, ರಕ್ತದ ಸಕ್ಕರೆ ಅಂಶ ನಿಯಂತ್ರಣ, ಅವಶ್ಯವಿದ್ದಷ್ಟು ನೀರು ಕುಡಿಯುವುದು, ವೈದ್ಯರ ಸಲಹೆ ಪಡೆದು ಮಾತ್ರೆ ತೆಗೆದುಕೊಳ್ಳುವುದು ಮುಖ್ಯ ಎಂದರು.

» ಮೂತ್ರಪಿಂಡ ರೋಗ ಮಾಹಿತಿ ಶಿಬಿರದಲ್ಲಿ ಡಾ.ಶರತ್ ಅಭಿಪ್ರಾಯ

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಜಿ.ಮುತ್ತನ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಮೂತ್ರಪಿಂಡ ವಿಭಾಗದ ಪ್ರಾಧ್ಯಾಪಕ ಡಾ.ಶಂಕರ್ ಪ್ರಸಾದ್ ಎನ್., ಮಕ್ಕಳ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ. ಲೆಸ್ಲಿಈ ಲೀವಿಸ್, ಡಾ.ಮಂಜುನಾಥ್, ಡಾ.ರವೀಂದ್ರ ಪ್ರಭು ಎ, ಡಾ. ದರ್ಶನ್ ರಂಗಸ್ವಾಮಿ, ಡಾ.ನವೀನ್ ಎಸ್. ಸಲೀನ್ಸ್ ಮೊದಲಾದವರು ಉಪಸ್ಥಿತರಿದ್ದರು.



ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವಿಶ್ವ ಮೂತ್ರಪಿಂಡ ದಿನ ಅಂಗವಾಗಿ ಗುರುವಾರ ಮಕ್ಕಳ ಮೂತ್ರಪಿಂಡ ವಿಭಾಗ ಉದ್ಘಾಟನೆ ಮತ್ತು ಮೂತ್ರಪಿಂಡ ರೋಗಿಗಳಿಗೆ ಕಾಯಿಲೆ ಬಗ್ಗೆ ಜಾಗೃತಿ ಶಿಬಿರ ನಡೆಯಿತು.

ಪ್ರಜಾವಾಣಿ ಶುಕ್ರವಾರ • ಮಾರ್ಚ್ 12, 2021

# ‘ವರ್ಷಕ್ಕೊಮ್ಮೆ ಕಿಡ್ನಿ ಪರೀಕ್ಷೆ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಉಡುಪಿ: ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಗುರುವಾರ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಮೂತ್ರಪಿಂಡ ವಿಭಾಗದ ಉದ್ಘಾಟನೆ ಹಾಗೂ ಮೂತ್ರಪಿಂಡ ಕಾಯಿಲೆ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ವಿಭಾಗದ ಪ್ರಾಧ್ಯಾಪಕಿ ಡಾ.ಪುಷ್ಪಾ ಜಿ.ಕಿಣಿ ವಿಭಾಗ ಉದ್ಘಾಟಿಸಿ ಮಾತನಾಡಿ, ‘ಮೂತ್ರಪಿಂಡ ಕಾಯಿಲೆ ಇರುವವರು ಉತ್ತಮ ಜೀವನ ನಡೆಸಲು ಎಂಟು ಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಧನಾತ್ಮಕ ಚಿಂತನೆ, ನಿಯಮಿತ ವೈದ್ಯರ ಭೇಟಿ ಮತ್ತು ಕಿಡ್ನಿ ಪರೀಕ್ಷೆ, ಧೂಮಪಾನದಿಂದ ದೂರ, ಪೌಷ್ಟಿಕಾಂಶವುಳ್ಳ ಪಥ್ಯಾಹಾರ ಸೇವನೆ, ರಕ್ತದೊತ್ತಡ ನಿಯಂತ್ರಣ, ರಕ್ತದ ಸಕ್ಕರೆ ಅಂಶ ನಿಯಂತ್ರಣ, ಅಗತ್ಯ ಪ್ರಮಾಣದ ನೀರು ಕುಡಿಯಬೇಕು. ವೈದ್ಯರ ಸಲಹೆ ಪಡೆಯದೆ ಮಾತ್ರೆ ತೆಗೆದುಕೊಳ್ಳಬಾರದು ಎಂದು ಸಲಹೆ ನೀಡಿದರು.



ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಗುರುವಾರ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಮೂತ್ರಪಿಂಡ ವಿಭಾಗವನ್ನು ಉದ್ಘಾಟಿಸಲಾಯಿತು.

ಮೂತ್ರಪಿಂಡ ಕಾಯಿಲೆ ಬಗ್ಗೆ ಅರಿವು ಮತ್ತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೆಎಂಸಿ ಡೀನ್ ಡಾ.ಶರತ್ ಕೆ ರಾವ್ ‘ಪ್ರತಿ ವರ್ಷ ಮಾರ್ಚ್ ಎರಡನೇ ಗುರುವಾರವನ್ನು ಮೂತ್ರ ಪಿಂಡ ದಿನವನ್ನಾಗಿ ಆಚರಿಸಲಾಗುತ್ತದೆ. ಜೀವನ ಶೈಲಿಯ ಬದಲಾವಣೆಯಿಂದ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಕಾಯಿಲೆ ಬರಲಿದ್ದು, ಕಿಡ್ನಿಗಳ ಮೇಲೆ ಪರಿಣಾಮ ಬೀರುತ್ತವೆ. ತಕ್ಷಣ ಜಾಗೃತಿ ವಹಿಸಿದರೆ ಶೇ 50ರಷ್ಟು ಕಿಡ್ನಿ ಕಾಯಿಲೆ ಕಡಿಮೆ ಮಾಡಬಹುದು. ಈಚೆಗಿನ ಸಂಶೋಧನೆ ಪ್ರಕಾರ ಕೈಗಾರಿಕಾ ತ್ಯಾಜ್ಯದಿಂದ ಬೆಳೆದ ಆಹಾರ ಪದಾರ್ಥವೂ ಮೂತ್ರಪಿಂಡ ಕಾಯಿಲೆಗೆ ಕಾರಣವಾಗುತ್ತಿದೆ. ವರ್ಷಕ್ಕೊಮ್ಮೆ ಕಿಡ್ನಿ ಪರೀಕ್ಷಿಸಿಕೊಳ್ಳಬೇಕು ಎಂದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಜಿ.ಮುತ್ತನ್ನ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಮೂತ್ರಪಿಂಡ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಶಂಕರ್ ಪ್ರಸಾದ್, ಮಕ್ಕಳ ವಿಭಾಗದ ಪ್ರಾಧ್ಯಾಪಕ ಡಾ. ಲೆಸ್ಲಿ ಲೀವಿಸ್ ಇದ್ದರು.

ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಡಾ.ಮಂಜುನಾಥ್, ಡಾ.ರವೀಂದ್ರ ಪ್ರಭು ಡಾ.ದರ್ಶನ್ ರಂಗಸ್ವಾಮಿ, ಡಾ. ನವೀನ್ ಎಸ್. ಸಲೀನ್ಸ್ ಇದ್ದರು.

ಮಕ್ಕಳ ಮೂತ್ರಪಿಂಡ ವಿಭಾಗವನ್ನು ತಜ್ಞ ಡಾ. ದರ್ಶನ್ ರಂಗಸ್ವಾಮಿ ಮುನ್ನಡೆಸಲಿದ್ದಾರೆ. ಆಸ್ಟ್ರೇಲಿಯಾದ ಸಿಡ್ನಿಯ ರಾಯಲ್ ಆಸ್ಟ್ರೇಲಿಯನ್ ಕಾಲೇಜ್ ಆಫ್ ಫಿಸಿಶಿಯನ್‌ನಿಂದ ಅನುಮೋದಿಸಲಾಗಿರುವ ಪಿಡಿಯಾಟ್ರಿಕ್ ನೆಫ್ರಾಲಜಿಯಲ್ಲಿ ಕ್ಲಿನಿಕಲ್ ಫೆಲೋಶಿಪ್ ಪಡೆದಿದ್ದಾರೆ ದರ್ಶನ್. ಪ್ರತಿ ಸೋಮವಾರ ಮತ್ತು ಶುಕ್ರವಾರ ಸಮಾಲೋಚನೆಗಾಗಿ ಲಭ್ಯವಿರುತ್ತಾರೆ. ಹೊಸ ವಿಭಾಗದ ಪ್ರಯುಕ್ತ ಮಾರ್ಚ್ 31ರವರೆಗೆ ಉಚಿತ ಸಮಾಲೋಚನೆ ಮತ್ತು ಪ್ರಯೋಗಾಲಯ ಶುಲ್ಕದಲ್ಲಿ ಶೇ 30 ರಿಯಾಯಿತಿ ನೀಡಲಾಗುವುದು ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ತಿಳಿಸಿದ್ದಾರೆ.

ವಿಜಯ ಕರ್ನಾಟಕ

ಶುಕ್ರವಾರ,12 ಮಾರ್ಚ್ 2021,

# ಮಕ್ಕಳ ಮೂತ್ರಪಿಂಡ ತಪಾಸಣೆ ವಿಭಾಗ ಉದ್ಘಾಟನೆ



■ **ವಿಕ ಸುದ್ದಿಲೋಕ** ಉಡುಪಿ

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವಿಶ್ವ ಮೂತ್ರಪಿಂಡ ದಿನದಂದು ಗುರುವಾರ ಮಕ್ಕಳ ಮೂತ್ರಪಿಂಡ ತಪಾಸಣೆ ವಿಭಾಗದ ಉದ್ಘಾಟನೆ ಹಾಗೂ ಮೂತ್ರಪಿಂಡ ಕಾಯಿಲೆ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಆಸ್ಪತ್ರೆಯ ಮಕ್ಕಳ ವಿಭಾಗದ ಪ್ರಾಧ್ಯಾಪಕಿ ಮತ್ತು ಘಟಕದ ಮುಖ್ಯಸ್ಥೆ ಡಾ. ಪುಷ್ಪಾ ಜಿ. ಕಿಣಿ ಉದ್ಘಾಟಿಸಿ ಮಾತನಾಡಿ, ಮೂತ್ರಪಿಂಡ ಕಾಯಿಲೆ ಇರುವವರು ಧನಾತ್ಮಕ ಚಿಂತನೆ, ನಿಯಮಿತವಾಗಿ ವೈದ್ಯರ ಭೇಟಿ, ಕಿಡ್ನಿ ಪರೀಕ್ಷೆ, ಧೂಮಪಾನದಿಂದ ದೂರ, ಪೌಷ್ಟಿಕ ಪಥ್ಯಾಹಾರ, ರಕ್ತದೊತ್ತಡ, ರಕ್ತದ ಸಕ್ಕರೆ ಅಂಶದ ನಿಯಂತ್ರಣ, ಅವಶ್ಯವಿದ್ದಷ್ಟು ನೀರು ಕುಡಿಯುವುದು ಮೊದಲಾದ ಕಾರ್ಯಗಳ ಕಡೆ ಗಮನ ನೀಡಬೇಕು ಎಂದರು.

ಮೂತ್ರಪಿಂಡ ಕಾಯಿಲೆ ಬಗ್ಗೆ ಅರಿವು ಮತ್ತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿದ ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್ ಮಾತನಾಡಿ, ಜಾಗೃತಿಯಿಂದ ಶೇ.50 ರಷ್ಟು ಕಿಡ್ನಿ ಕಾಯಿಲೆಯನ್ನು ಕಡಿಮೆ ಮಾಡಬಹುದು ಎಂದರು .

ಆಸ್ಪತ್ರೆಯ ಸಿಇಒ ಸಿ.ಜಿ.ಮುತ್ತನ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಉಪಸ್ಥಿತರಿದ್ದರು. ಮೂತ್ರಪಿಂಡ ತಪಾಸಣೆ ವಿಭಾಗದ ಪ್ರಾಧ್ಯಾಪಕ ಡಾ. ಶಂಕರ್ ಪ್ರಸಾದ್ ಎನ್. ಸ್ವಾಗತಿಸಿ, ಮಕ್ಕಳ ವಿಭಾಗದ ಪ್ರಾಧ್ಯಾಪಕ ಡಾ. ಲೆಸ್ಲಿ ಲೀವಿಸ್ ವಂದಿಸಿದರು. ಡಾ. ದರ್ಶನ್ ರಂಗಸ್ವಾಮಿ ಮಕ್ಕಳ ಮೂತ್ರಪಿಂಡ ವಿಭಾಗದ ಅವಲೋಕನ ನೀಡಿದರು.

ಹೊಸ ವಿಭಾಗದ ಆರಂಭದ ಪ್ರಯುಕ್ತ ಮಾ.31ರ ವರೆಗೆ ಉಚಿತ ಸಮಾಲೋಚನೆ ಮತ್ತು ಪ್ರಯೋಗಾಲಯ ಶುಲ್ಕದಲ್ಲಿ ಶೇ.30 ರಿಯಾಯಿತಿ ನೀಡಲಾಗುವುದು ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.